ಚಳವಳಿಗೆ ಅರ್ಪಿಸುತ್ತಿದ್ದೇನೆ. ಹಾಗೆಯೇ, 2001ರಲ್ಲಿ ದಕ್ಷಿಣ ಆಫ್ರಿಕದ ಡರ್ಬನ್‌ನಲ್ಲಿ ನಡೆದ ಜನಾಂಗೀಯತೆ, ಜನಾಂಗೀಯ ತಾರತಮ್ಯ, ಪರಕೀಯ ದ್ವೇಷ ಹಾಗೂ ಸಂಬಂಧಿತ ಅಸಹಿಷ್ಣುತೆ ವಿರುದ್ಧದ ವಿಶ್ವ ಸಮಾವೇಶದಲ್ಲಿ ಜಾತಿಯಾಧಾರಿತ ತಾರತಮ್ಯವನ್ನೂ ಪಟ್ಟಿಯಲ್ಲಿ ಸೇರಿಸಬೇಕು ಎಂಬ ಆಗ್ರಹವನ್ನು ಮಂಡಿಸಿದಾಗ, ಭಾರತ ಸರಕಾರ ಅದನ್ನು ಬೆಂಬಲಿಸುವುದಿಲ್ಲವೆಂದು ಹಿಂದೆ ಸರಿದಿತ್ತು. ನಂತರದ ಜಾಗತಿಕ ಬೆಳವಣಿಗೆಗಳಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸ್ವಾತಂತ್ರ್ಯಪೂರ್ವದಲ್ಲಿಯೇ, "ಹಿಂದೂಗಳು ಭೂಮಿಯ ಬೇರೆ ಭಾಗಗಳಿಗೆ ವಲಸೆ ಹೋಗುತ್ತಿದ್ದ ಹಾಗೆ, ಭಾರತೀಯ ಜಾತಿ ವಿಶ್ವ ಸಮಸ್ಯೆಯಾಗಲಿದೆ" ಎಂದು ನುಡಿದಿದ್ದ ಹಾಗೆಯೇ, ಜಾತಿ ಅಧ್ಯಯನವೆನ್ನುವುದು ಇಂದು ಜಾಗತಿಕ ಮಟ್ಟದಲ್ಲಿ ಅಕಡೆಮಿಕ್ ಶಿಸ್ತಾಗಿ ಬೆಳೆಯುತ್ತಿದೆ. ಆ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ನನ್ನ ಈ ವಾದವನ್ನು ಮಂಡಿಸುತ್ತಿದ್ದೇನೆ. ಮುಖ್ಯವಾಗಿ, ಕನ್ನಡ ಸಂದರ್ಭದಲ್ಲಿ ವಿಮರ್ಶೆಯೆನ್ನುವುದು ಅಕಡೆಮಿಕ್ ವಾದವಾಗಿ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಹೇಗೆ ಇತ್ತು, ಹೇಗೆ ಬೆಳೆಯುತ್ತಾ ಬಂತು, ಹೇಗಾಗಬೇಕಿತ್ತು, ಯಾಕಾಗಲಿಲ್ಲ ಅನ್ನುವ ಪ್ರಶ್ನೆಗಳನ್ನಿಟ್ಟುಕೊಂಡು ಇಪ್ಪತ್ತೊಂದನೇ ಶತಮಾನಕ್ಕೆ ಬೇಕಾದಂತಹ ವಿಮರ್ಶೆಯ ವಾದವನ್ನು ಮಂಡಿಸುತ್ತಿದ್ದೇನೆ.

1973ರಲ್ಲಿ ಬಸವಲಿಂಗಪ್ಪನವರ ಬೂಸಾ ಹೇಳಿಕೆಗೆ ವಿರೋಧ ವ್ಯಕ್ತವಾಗಿದ್ದು ಪ್ರಬಲ ಸಮುದಾಯಗಳ ಸಾಹಿತಿಗಳಿಂದ, ರಾಜಕಾರಣಿಗಳಿಂದ ಹಾಗೂ ಬಲಪಂಥೀಯರಿಂದ. ಇಂದು ದೇಶವನ್ನಾವರಿಸಿಕೊಂಡಿರುವ ಆರೆಸ್ಸೆಸ್‌ನ ಮುಖವಾಣಿಯಾದ 'ಅಬ್ಸರ್ವರ್' ಪತ್ರಿಕೆ, ವಿಶ್ವ ಹಿಂದೂ ಪರಿಷತ್‌ನ ಮುಖ್ಯಸ್ಥರಾಗಿ ಹರಿಜನೋದ್ಧಾರವನ್ನು ಪ್ರತಿಪಾದಿಸಿದ್ದ ಪೇಜಾವರ ಶ್ರೀಗಳೊಟ್ಟಿಗೆ ದೇವರಾಜ ಅರಸು ಅವರ ಸಚಿವ ಸಂಪುಟದ ಮೇಲ್ಜಾತಿಯ ಸಚಿವರಲ್ಲೆರೂ ಉಗ್ರ ಪ್ರತಿರೋಧವನ್ನು ತೋರಿ, ಬಸವಲಿಂಗಪ್ಪನವರ ರಾಜೀನಾಮೆಗೆ ಆಗ್ರಹಿಸಿದ್ದರು. ಅಂತಹ ಸನ್ನಿವೇಶದಲ್ಲೂ ಬಸವಲಿಂಗಪ್ಪನವರ ಬೆಂಬಲಕ್ಕೆ ಎಲ್ಲ ಸಮುದಾಯಗಳ ಪ್ರಗತಿಪರರ ಬೆಂಬಲವಿದ್ದೇ ಇತ್ತೆಂಬುದು ಸಮಾಧಾನಕರ ಸಂಗತಿ. ಬಹುಶಃ, ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಅಪಾರ ವಿದ್ಯಾರ್ಥಿ ಬಳಗ ರಾಜಕಾರಣಿಯೊಬ್ಬರ ಬೆಂಬಲಕ್ಕೆ ನಿಂತಿತ್ತು. ಬಹುಶಃ, ಅಷ್ಟು ದೊಡ್ಡ ವಿದ್ಯಾರ್ಥಿ ಪ್ರತಿಭಟನೆ ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಆಗಿರಲಿಕ್ಕಿಲ್ಲವೇನೋ. ಆಗ "ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಕರೆದಾಗ ಹಾಗೇಕೆ ಕರೆದರೆಂಬ ಪ್ರಶ್ನೆಯನ್ನು ನಮಗೆ ನಾವು ಕೇಳಿಕೊಳ್ಳಬೇಕು. ನಮ್ಮ ಮತಧರ್ಮಗಳಿಂದ ವಂಚಿತರಾಗಿ ಹೊರಗುಳಿದ ಪಂಚಮರಿಗೆ ಮತೀಯ ಸಾಹಿತ್ಯದಿಂದ ತುಂಬಿದ ಕನ್ನಡ ಸಾಹಿತ್ಯ ಅರ್ಥಹೀನವಾಗಿ ಕಂಡರೆ, ಅದರಲ್ಲಿ ಆಶ್ಚರ್ಯವೇನಿದೆ? ಅಲ್ಲದೆ ಪಂಚಮರು ಕನ್ನಡ ಸಾಹಿತ್ಯದ ಇಂತಹ ಮತೀಯ ಪರಂಪರೆಯನ್ನು ಉದ್ವಿಗ್ನತೆಯಲ್ಲಿ ತ್ಯಜಿಸಿದಾಗ ಮಹಾರಾಷ್ಟ್ರದ ಮಹರ್ ಜನಾಂಗದ ಲೇಖಕರಂತೆ (ಪ್ಯಾಂಥರ್ಸ್) ಇವರೂ ಕನ್ನಡಕ್ಕೆ ನಿಜವಾಗಿಯೂ ಹೊಸದಾದ್ದನ್ನು ಸೇರಿಸುವ ಸಾಧ್ಯತೆಯಿಲ್ಲವೇ" ಎಂದು ನವ್ಯ ಪಂಥದ ಪ್ರಮುಖ ಸಾಹಿತಿ ಹಾಗೂ ಲೋಕಚಿಂತಕರಾದ ಯು. ಆರ್. ಅನಂತಮೂರ್ತಿಯವರು ಪ್ರಶ್ನಿಸಿದ್ದರು. ಲೋಹಿಯಾ ಸಮಾಜವಾದಿಯಾಗಿದ್ದ ಅವರು, ದಲಿತ ಪ್ರತಿಭಟನೆಗಳಲ್ಲಿ ಭಾಗವಹಿಸುತ್ತ, ದಲಿತಪರ ಪತ್ರಿಕಾ ಹೇಳಿಕೆಗಳನ್ನು ನೀಡುತ್ತ, ದಲಿತ ಚಳವಳಿಯ ಪ್ರಮುಖ ಬೆಂಬಲಿಗರಾಗಿ ನಿಂತವರು. ಆದರೆ, ನವ್ಯ ಕಾಲಘಟ್ಟದಲ್ಲಿ ಪ್ರಕಟವಾಗಿಯೂ ನವ್ಯ ಕಾದಂಬರಿಗಳೆಲ್ಲವನ್ನೂ ಮೀರಿಸಿ, ಕನ್ನಡದ ಸರ್ವಶ್ರೇಷ್ಠ ಕಾದಂಬರಿ ಎಂದೇ ಮನ್ನಣೆ ಗಳಿಸಿದ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ 'ಈ ಕಾದಂಬರಿಯಲ್ಲಿ ಕೇಂದ್ರವಿಲ್ಲ' ಎಂಬ ಸಲ್ಲದ ವಿಮರ್ಶೆ ಬರೆದು ಕುಖ್ಯಾತಿಯನ್ನೂ ಪಡೆದಿದ್ದರು. ತಮ್ಮ ಮೊದಲ ಕಾದಂಬರಿ 'ಸಂಸ್ಕಾರ'ದ ಮೂಲಕ ಬಹುದೊಡ್ಡ ಸಂಪ್ರದಾಯಭಂಗ ಮಾಡಿ ತಮ್ಮ ಸಮುದಾಯದ ವಿರೋಧವನ್ನೇ ಕಟ್ಟಿಕೊಂಡಿದ್ದಂತಹ, ದಲಿತ ಚಳವಳಿ, ರೈತ ಚಳವಳಿಗಳನ್ನು ಬೆಂಬಲಿಸಿ ಕರ್ನಾಟಕ ಸಮಾಜವಾದಿ ವಲಯದಲ್ಲಿ ಕಂಗೊಳಿಸುತ್ತಿದ್ದಂತಹ, ಕೆಲ ದಶಕಗಳ ನಂತರ ಸಾಹಿತಿಯಾಗಿ, ಲೋಕಚಿಂತಕರಾಗಿ ಇಡೀ ರಾಷ್ಟ್ರ ಹಾಗೂ ವಿಶ್ವದ